**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ., ನ್ಯಾಯಾಲಯ,ಹೊಸದುರ್ಗ.**

ಅಸಲು ದಾವಾ ಸಂಖ್ಯೆ **373/2021** ದಿನಾಂಕಃ **17.02.2026**

ಪಿ.ಡಬ್ಲ್ಯೂಃ **1**

ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಃ **4, 9,10** ಮತ್ತು **12** ನೇ ಪ್ರತಿವಾದಿಯರ ಪರ ಶ್ರೀ ಬಿ ಸಿ ಎಸ್ ವಕೀಲರಿಂದ

1. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ದಲ್ಲಿ ಬರೆಸಿರುವ ವಿಚಾರಗಳು ನನಗೆ ಗೊತ್ತು. ಸದರಿ ಪ್ರಮಾಣ ಪತ್ರ ರಚಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ದಾವಾ ಸ್ವತ್ತುಗಳ ಉತ್ತರ ದಿಕ್ಕಿನಲ್ಲಿ ನನಗೆ ಸೇರಿದ ಸ್ವತ್ತು ಇರುತ್ತದೆ. ಸದರಿ ಸ್ವತ್ತಿನ ಸರ್ವೇ ನಂ. 16 ಅದರ ಒಟ್ಟು ವಿಸ್ತೀರ್ಣ 9 ಎಕರೆ 19 ಗುಂಟೆ ಇರುತ್ತದೆ. ಸದರಿ ಸರ್ವೇ ನಂ. 16 ರಲ್ಲಿ ನಾನು ಚಿಕ್ಕವಯಸ್ಸಿನವಾಗಿನಿಂದಲೂ ನಾನೇ ಸಾಗುವಳಿ ಮಾಡುತ್ತಿದ್ದೇನೆ. ಸದರಿ ಸರ್ವೇ ನಂ. 16 ರ 9 ಎಕರೆ 19 ಗುಂಟೆ ಜಮೀನನ್ನು ನಾನು ಮತ್ತು ನನ್ನ ಸಹೋದರ ಅಂದರೆ 5 ನೇಪ್ರತಿವಾದಿಯ ಗಂಡ ದೇವರಾಜ್ ವಿಭಾಗ ಮಾಡಿಕೊಂಡಿರುತ್ತೇವೆ. ನಾವು ವಿಭಾಗ ಮಾಡಿಕೊಂಡು ಸುಮಾರು 22 ವರ್ಷಗಳು ಆಗಿರುತ್ತವೆ.

2. ದಾವಾ 2 ಮತ್ತು 3 ನೇ ಸ್ವತ್ತಿನಲ್ಲಿ ಅಡಿಕೆ ಮರಗಳು ಇರುತ್ತವೆ. ಸದರಿ ಜಮೀನುಗಳಲ್ಲಿ 13 ಮತ್ತು 14 ನೇ ಪ್ರತಿವಾದಿಗಳು ಬೋರ್ ವೆಲ್ ಕೊರೆಸಿ ಅಡಿಕೆ ತೋಟ ಮಾಡಿಕೊಂಡಿರುತ್ತಾರೆ ಎಂದರೆ ಸರಿ . ಅದೇರೀತಿ ಮನೆಯನ್ನು ಸಹ ಕಟ್ಟಿಸಿಕೊಂಡಿರುತ್ತಾರೆ ಎಂದರೆ ಸರಿ . ಸದರಿ ಅಡಿಕೆ ಮರಗಳು ಸುಮಾರು 15 ವರ್ಷಗಳ ಮರಗಳು . ಸದರಿ ಮರಗಳು 25 ವರ್ಷಕ್ಕಿಂತ ಹಳೆವು ಎಂದರೆ ಸಾಕ್ಷಿ ಹಳೆಯ, ಇತ್ತೀಚಿನ ಮತ್ತು ಸುಮಾರು 20 ವರ್ಷದ ಅಡಿಕೆ ಮರಗಳು ಇರುತ್ತವೆ ಎಂದು ನುಡಿಯುತ್ತಾರೆ. 13 ಮತ್ತು 14 ನೇ ಪ್ರತಿವಾದಿಯರು ದಾವಾ 2 ಮತ್ತು 3 ನೇ ಸ್ವತ್ತಿನಲ್ಲಿ ಬೋರ್ ವೆಲ್ ಕೊರೆಸಿ ಅಡಿಕೆ ಮರಗಳನ್ನು ಬೆಳೆಸಿರುವ ವಿಚಾರ ನನಗೆ ಮೊದಲಿನಿಂದಲೂ ತಿಳಿದಿರುತ್ತದೆ. ದಾವಾ ಐಟಂ

ನಂಬರ್ 2 ಮತ್ತು 3 ನೇ ಸ್ವತ್ತನ್ನು 13 ನೇ ಪ್ರತಿವಾದಿ 1989 ರಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1989 ರಿಂದಲೂ 13 ನೇ ಪ್ರತಿವಾದಿ ದಾವಾ ಐಟಂ ನಂಬರ್ 2 ಮತ್ತು 3 ನೇ ಸ್ವತ್ತಿನಲ್ಲಿ ಮನೆ ಕಟ್ಟಿಸಿ ಅಲ್ಲಿಯೇ ವಾಸಿಸುತ್ತಿರುತ್ತಾರೆ ಎಂದರೆ ಸಾಕ್ಷಿ ಈಗ 3 ವರ್ಷಗಳಿಂದ ವಾಸವಿರುತ್ತಾರೆ ಎಂದು ನುಡಿಯುತ್ತಾರೆ.

3. ಶ್ರೀ ಪಾಹ್ಲದ್ , ಹನುಮಂತಪ್ಪ ಮತ್ತು ಸುಭಾಷ್ ಚಂದ್ರುರವರು ಖಲೀಲ್ ಸಾಬ್ ರವರಿಗೆ 1983 ರಲ್ಲಿ ದಾವಾ ಐಟಂ ನಂಬರ್ 2 ಮತ್ತು 3 ನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಸದರಿ ಖಲೀಲ್ ಸಾಬ್ ರವರು 1989 ರಲ್ಲಿ ಸದರಿ ಸ್ವತ್ತುಗಳನ್ನು 13 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಈ ರೀತಿ ಮಾರಾಟವಾದ ವಿಷಯ ನನ್ನದಾವೆಯಲ್ಲಿ ಬರೆಸಿರುವುದಿಲ್ಲ . ಸದರಿ ವಿಷಯ ನನಗೆ ತಿಳಿದಿದ್ದು ನಾನು ದಾವೆಯಲ್ಲಿ ಬರೆಸಿರುತ್ತೇನೆ ಎಂದರೆ ಸಾಕ್ಷಿ ಕ್ರಯ ಪತ್ರ ನೋಡಿದ ನಂತರ ತಿಳಿದುಕೊಂಡು ಬರೆಸಿರುತ್ತೇನೆ ಎಂದು ನುಡಿಯುತ್ತಾರೆ.

4. ನನ್ನ ತಾಯಿ ಇತ್ತೀಚೆಗೆ ಮರಣ ಹೊಂದಿರುತ್ತಾರೆ ಎಂದು ಬರೆಸಿದ್ದು ನನಗೆ ದಿನಾಂಕ , ತಿಂಗಳು ಮತ್ತು ಇಸವಿ ಗೊತ್ತಿಲ್ಲ. ನನ್ನ ತಾಯಿ ದಿಃ 24.08.1996 ರಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸುಳ್ಳು . ಸದರಿ ವಿಚಾರ ತಿಳಿದಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ನಮ್ಮ ಗ್ರಾಮದಲ್ಲಿ ಗ್ರಾಮಸ್ಥರಿಗೆ ರೆವಿನ್ಯೂ ಇಲಾಖೆಯಲ್ಲಿನ ಕೆಲಸಗಳನ್ನು ಮಾಡಿಕೊಡುತ್ತೇನೆ ಎಂದರೆ ಸರಿಯಲ್ಲ . ಆದ ಕಾರಣ ನನಗೆ ಎಲ್ಲಾ ರೆವಿನ್ಯೂ ಅಧಿಕಾರಿಗಳ ಜೊತೆ ಉತ್ತಮ ಬಾಂದವ್ಯ ಇರುತ್ತದೆ ಎಂದರೆ ಸರಿಯಲ್ಲ . ಖಲೀಲ್ ಸಾಬ್ 1983 ರಲ್ಲಿ ಖರೀದಿ ಮಾಡಿದ ವಿಚಾರ ಹಾಗೂ 1989 ರಲ್ಲಿ 13 ನೇ ಪ್ರತಿವಾದಿಗೆ ದಾವಾ 2 ಮತ್ತು 3 ನೇ ಸ್ವತ್ತನ್ನು ಮಾರಾಟ ಮಾಡಿದ ವಿಚಾರ ನನಗೆ ಆಗಲೇ ತಿಳಿದಿದ್ದರೂ ತಿಳಿದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಆಗ ನಾನು ಭದ್ರಾವತಿಯ ಅಲೆಮನೆಗಳಲ್ಲಿ ಕೂಲಿ ಕೆಲಸಕ್ಕೆ ಹೋಗಿರುತ್ತೇನೆ. ಸದರಿ

ವಿಷಯವನ್ನು ನಾನು ದಾವೆ ಮತ್ತು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ.

5. ಸರ್ವೇ ನಂ. 16 ರಲ್ಲಿ ನಾನು ವಿಭಾಗ ಮಾಡಿಕೊಂಡ ನಂತರ ಬೋರ್ ವೆಲ್ ಕೊರೆಸಿ 8-10 ವರ್ಷಗಳಿಂದ ನೀರಾವರಿ ಜಮೀನು ಮಾಡಿಕೊಂಡಿರುತ್ತೇನೆ . ಅದಕ್ಕಿಂತ ಮೊದಲು ನಾನು ಮಳೆ ಆಶ್ರಿತ ಬೆಳೆಗಳನ್ನು ಬೆಳೆಯುತ್ತಿದ್ದೆ. ನನ್ನ ಅಕ್ಕ ಪಕ್ಕದ ಜಮೀನಿನಲ್ಲಿ ಬೆಳೆದಿರುವ ಬೆಳೆಗಳ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ ಎಂದರೆ ಸರಿ .

**ವಕೀಲರು ಮುಂದುವರೆದ** ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ.

(ಪ್ರಸನ್ನ ಕುಮಾರ್ ಸಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.